# ಕಣ್ಮರೆಯಾಗುತ್ತಿದೆ ಬೇಲಿ ದಾಸವಾಳ

■ ಚಿತ್ರ – ಬರಹ:
**ದೇವರು ಆರ್ ಭಟ್ಟ ಕಲಗಾರು**



ಅಲಂಕಾರಿಕ ಸಸ್ಯಗಳಾಗಿ ದಾಸವಾಳವನ್ನು ಕುಂಡಗಳಲ್ಲಿ ಬೆಳೆಸಿ ಬಣ್ಣ ಬಣ್ಣದ ಹೂವುಗಳಿಂದ ಮನೆಯಂಗಳವನ್ನು ಸಿಂಗರಿಸುತ್ತಾರೆ. ಹೀಗೆ ಬೆಳೆಸುವ ಬಣ್ಣಬಣ್ಣದ ದಾಸವಾಳಗಳಲ್ಲಿ ಹೈಬ್ರಿಡ್ ತಳಿಗಳದೇ ಪಾರುಪತ್ಯ. ಹೂವುಗಳಿಗಾಗಿಯೇ ಬೆಳೆಸುವ ಈ ಸಸ್ಯಗಳಿಗೆ ನೀರು ಗೊಬ್ಬರಗಳನ್ನು ನೀಡಿ ಆರೈಕೆ ಮಾಡುವುದೇ ದೊಡ್ಡ ಸಮಸ್ಯೆ. ನಾಟಿ ದಾಸವಾಳಗಳಲ್ಲಿ ಪಂಚದಳ (ಒಂದೇ ಸುತ್ತಿನ) ದಾಸವಾಳ, ಚಂಡುದಾಸವಾಳ, ಹಳದಿ, ಬಿಳಿ ಮುಂತಾದವು ದೊರೆಯುತ್ತವೆ. ಕೆಲವನ್ನು ಬಿಟ್ಟರೆ ಉಳಿದವು ಹೂವಿಗಾಗಿ ಬೆಳೆಯುವ ದಾಸವಾಳಗಳೇ ಆಗಿವೆ.

ದಾಸವಾಳದ ವಿಶಿಷ್ಟ ಪ್ರಬೇಧವೊಂದಿದೆ. ಅದು ಬೇಲಿ ದಾಸವಾಳ ಅಥವಾ ಬಾಲದ ದಾಸವಾಳ. ರೈತಾಪಿ ಜನರು ಹಿಂದಿನ ದಿನಗಳಲ್ಲಿ ಗದ್ದೆ, ತೋಟಗಳ ಬದುಗಳಲ್ಲಿ ಬೇಲಿ ನಿರ್ಮಿಸಲು ಬೆಳೆಸುತ್ತಿದ್ದರು. ಬೇಲಿ ದಾಸವಾಳ ಎಲೆಗಳು ಎಲ್ಲ ದಾಸವಾಳ ಎಲೆಗಳಂತೆ ಕಂಡುಬಂದರೂ ಇದರ ಟೊಂಗೆಗಳು ಹೆಚ್ಚು ಕವಲಾಗದೇ ಸಪೂರವಾಗಿ 68 ಅಡಿಗಳಷ್ಟು ಎತ್ತರಕ್ಕೂ ಬೆಳೆಯುತ್ತವೆ. ಒಳಭಾಗ ಕೆಂಪು ಹೊರಭಾಗ ಸ್ವಲ್ಪ ಬಿಳಿ ಮಿಶ್ರಣದಿಂದ ಕೂಡಿದ ಇದರ ಹೂವು ಸಪುರವಾದ ಉದ್ದನೆಯ ತೊಟ್ಟುಗಳನ್ನು ಹೊಂದಿದ್ದು ಸಹಜವಾಗಿ ಕೆಳಮುಖವಾಗಿ ಬಾಗಿರುತ್ತದೆ. ಎಸಳು ಎಸಳುಗಳು ಸೇರಿ ಪಕಳೆಗಳಾಗಿ ಪೂರ್ಣ ಅರಳಿದಾಗ ಮೇಲ್ಮುಖವಾಗಿ ಮಡಿಚಿಕೊಂಡು ಚೆಂಡಿನ ಆಕಾರ ತಳೆಯುತ್ತದೆ. ಹೂವಿನ ಮಧ್ಯದಲ್ಲಿ ಪುಂಕೇಸರು ಉದ್ದನೆಯ ಬಾಲದಂತೆ ಜೋತು ಬಿದ್ದಿರುತ್ತದೆ. (ಅದಕ್ಕಾಗಿಯೇ ಬಾಲದ ದಾಸವಾಳ ಎಂದು ಕರೆಸಿಕೊಳ್ಳುತ್ತದೆ.) ನೋಡಲು ತಕ್ಕಮಟ್ಟಿಗೆ ಸುಂದರವಾಗಿಯೇ ಇರುತ್ತದೆ.



ಬೇಲಿ ದಾಸವಾಳದ ಬರಲನ್ನು ಸಾಲಾಗಿ ನೆಟ್ಟು ಬುಡದಲ್ಲಿ ಸ್ವಲ್ಪ ಮಣ್ಣು ಕೊಟ್ಟು ಅಡಿಕೆ ದಬ್ಬೆ ಅಥವಾ ಬಿದಿರಿನ ಅಂಬಳವನ್ನು ಕಟ್ಟಿದರೆ ಬೇಲಿ ನಿರ್ಮಾಣವಾಗುತ್ತಿತ್ತು. ಸಣ್ಣ ಗಾತ್ರದ ಉದ್ದುದ್ದ ಕೋಲಾಗಿ ಬೆಳೆಯುವ ಬೇಲಿ ದಾಸವಾಳವನ್ನು ಬಗ್ಗಿಸಿ ಬೇಲಿ ಕಟ್ಟುವುದು ಸುಲಭ. ಒಮ್ಮೆ ಬದುಕಿತೆಂದರೆ ಬೇಸಿಗೆಯಲ್ಲೂ ನೀರು, ಗೊಬ್ಬರ ಯಾವುದನ್ನೂ ಬಯಸದೆ ಬೆಳೆಯುತ್ತದೆ.

ಸೊಪ್ಪನ್ನು ದನಗಳಿಗೆ ಮೇವಾಗಿ ಅಥವಾ ಗೊಬ್ಬರಕ್ಕೆ ಬಳಸಬಹುದು. ನೀಳವಾಗಿ ಬೆಳೆಯುವ ಈ ಗಿಡದ ರೆಂಬೆಯ ಮೇಲಿನ ಹೊದಿಕೆ ನಾರಿನಿಂದ ಕೂಡಿದ್ದು, ಅನಿವಾರ್ಯವಾದಲ್ಲಿ ಹಸಿಯಾಗಿದ್ದಾಗ ಈ ನಾರನ್ನು ಹಗ್ಗವನ್ನಾಗಿಯೂ ಬಳಸಿ ಹೊರೆಗಳನ್ನು ಕಟ್ಟಬಹುದು. ತಂತಿ ಬೇಲಿ, ಎಲೆಕ್ಟ್ರಾನಿಕ್ಸ್ ಬೇಲಿ ಮುಂತಾದವು ಹೊಲ ಗದ್ದೆಗಳನ್ನು ರಕ್ಷಿಸಲು ಬಂದ ನಂತರ ಬೇಲಿ ದಾಸವಾಳ ಕಳೆದುಹೋಗುತ್ತಿದೆ. ●